ಆ ವರ್ಷ ಪಾಸಾಗಿದ್ದವರು ಪ್ರಶಾಂತ ಮತ್ತು ರಂಗ ಇಬ್ಬರೆ. ಮೇಷ್ಟ್ರ ಕಾಳಜಿಯ ಮೇರೆಗೆ ಇವರಿಬ್ಬರೂ ಹೋಗಿ ಪಿಯುಸಿ ಓದಲು ತಿಪಟೂರಿನ ಸರ್ಕಾರಿ ಕಾಲೇಜಿಗೆ ಸೇರಿ ಊಟ ವಸತಿಗೆ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ನೋಡಿಕೊಂಡರು. ಇತ್ತ ಗೌಡರ ಮಗಳು ಸೌಭಾಗ್ಯ ನಾಲ್ಕು ವಿಷಯಗಳಲ್ಲಿ ಫೇಲ್ ಆಗಿ, ಊರಲ್ಲೇ ಅಪ್ಪನ ತೆಂಗಿನ ತೋಟದಲ್ಲಿ ಬಿದ್ದ ಕಾಯಿಗಳನ್ನು ಲೆಕ್ಕ ಹಾಕತೊಡಗಿದಳು. ಊರು ಮನೆ ಎಲ್ಲ ಬಿಟ್ಟು ಹಾಸ್ಟೆಲ್‌ನ ಊಟ ನಿದ್ದೆಗೆ ಮಾರುಹೋಗಿದ್ದ ರಂಗನಿಗೆ ಮತ್ತೆ ಎಚ್ಚರಾದದ್ದು ತಾನಿರುವ ರೂಮಿಗೆ ಪೋಸ್ಟ್‌ಮೆನ್ ತಂದುಕೊಟ್ಟ ಒಂದು ಇನ್‌ಲ್ಯಾಂಡ್ ಲೆಟರ್‌ನಿಂದ. ಹೌದು, ಅದು ಅದೇ ಕಾಗುಣಿತ ದೋಷದ್ದಾಗಿತ್ತು. ಈಗ ಅದರಲ್ಲಿ ಪ್ರೀತಿ ಏಕಮುಖವಾಗಿ ಇನ್ನಷ್ಟು ಬಲಿತಿತ್ತು. ನೀನಿಲ್ಲದೆ ನಾನು ಉಳಿಯುವುದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಸಾಧಿಸಿತ್ತು. ಪತ್ರ ಕೈಲಿಡಿದುಕೊಂಡಿದ್ದ ರಂಗ ಪ್ರಶಾಂತನೊಂದಿಗೆ ಚರ್ಚಿಸುತ್ತ ಕಕ್ಕಾಬಿಕ್ಕಿಯಾಗಿದ್ದ.

ತಾನು ಯಾವುದೇ ತೀರ್ಮಾನಕ್ಕೆ ಬರುವ ಮುನ್ನವೇ ಅರ್ಧಂಬರ್ಧ ಪರೀಕ್ಷೆಗಳು ಮುಗಿದಿದ್ದ ಒಂದು ಮಧ್ಯಾಹ್ನ, ರಂಗನ ಅಪ್ಪ ಚಲುವಯ್ಯ ತೀರಿಹೋದ ಸುದ್ದಿಯನ್ನು ಯಾರೋ ಹೊತ್ತು ತಂದಿದ್ದರು. ಬರೆಯುತ್ತಿದ್ದ ಪರೀಕ್ಷೆಯನ್ನು ಬಿಟ್ಟೋದ ರಂಗ, ಅಪ್ಪನನ್ನು ಮಣ್ಣು ಮಾಡುವುದರ ಜೊತೆಗೆ ಅರ್ಧಂಬರ್ಧ ಬಿಟ್ಟು ಬಂದಿದ್ದ ತನ್ನ ವಿದ್ಯೆಯನ್ನೂ ಮಣ್ಣು ಮಾಡಿ ಅವ್ವ ಮತ್ತು ತನ್ನಿಬ್ಬರು ತಂಗಿಯರ ಹೊಟ್ಟೆಬಟ್ಟೆ ತುಂಬಿಸುವ ಸಂಸಾರದ ನೊಗ ಹೊತ್ತ. ಸದ್ಯ ಪ್ರಶಾಂತನಿಗೆ ಇಂಥಹ ಹೊಡೆತಗಳು ಯಾವೂ ಅಪ್ಪಳಿಸದೆ ಆತ ಡಿಗ್ರಿ, ಎಂ.ಎ. ಎಂದು ಓದುತ್ತಿದ್ದರೆ, ರಂಗ ಅವರಿವರ ತೋಟಗಳಿಗೆ ಮಣ್ಣು ಗೊಬ್ರ ಹೊರಲು ಹೋಗತೊಡಗಿದ.

ಹ್ಯಾರಿ ದಂಪತಿ ಬೆಂಕಿಪುರಕ್ಕೆ ಬರಲು

